MK (P) 01

# ಪ್ರಥಮ ಎಂ.ಎ. ಪರೀಕ್ಷೆ, ಜೂನ್ 2009

**(ಹೊಸ ಪಠ್ಯಕ್ರಮ : ಸಿಮ್ ಸ್ಕೀಂ)**

**ಕನ್ನಡ**

**ಕೋರ್ಸ್ – I : ಆಧುನಿಕ ಕನ್ನಡ ಸಾಹಿತ್ಯ : ಒಂದು ಪ್ರಕಾರ : ಕಾವ್ಯ**

ಸಮಯ : 3 ಗಂಟೆಗಳು ಗರಿಷ್ಠಾಂಕ : 90

***ಸೂಚನೆಗಳು :*** *1) **ಹತ್ತನೆಯ** ಪ್ರಶ್ನೆಯನ್ನು ಬಿಡದೆ ಒಟ್ಟು **ಆರು** ಪ್ರಶ್ನೆಗಳಿಗೆ ಉತ್ತರಿಸಿ.*

*2) **ಎಲ್ಲಾ** ಪ್ರಶ್ನೆಗಳಿಗೂ **ಸಮಾನ** ಅಂಕಗಳು.*

**(15×6=90)**

1. ಕನ್ನಡ ನವೋದಯ ಕಾವ್ಯದ ಸ್ವರೂಪ ಮತ್ತು ಇತಿಹಾಸವನ್ನು ತಿಳಿಸಿ.

2. ದಲಿತ–ಬಂಡಾಯ ಸಾಹಿತ್ಯದ ಹಿನ್ನೆಲೆ ಮತ್ತು ಲಕ್ಷಣವನ್ನು ಕುರಿತು ವಿವೇಚಿಸಿ.

3. ಕುವೆಂಪು ಅವರ 'ಪಕ್ಷಿಕಾಶಿ' ಕವನ ಸಂಕಲನದ ಯಾವುದಾದರೂ ಮೂರು ಸೂರ್ಯೋದಯ ಗೀತೆಗಳ ಮಹತ್ವ ಮತ್ತು ವೈಶಿಷ್ಟ್ಯವನ್ನು ಸ್ಪಷ್ಟಪಡಿಸಿ.

4. ದ.ರಾ.ಬೇಂದ್ರೆಯವರ 'ನಾದಲೀಲೆ ' ಕವನಸಂಕಲನದಲ್ಲಿಯ 'ಮಲ್ಲಾಡದ ಗಿಣಿಯೆ' , 'ಪಾರಿಜಾತ ' ಮತ್ತು 'ಶ್ರಾವಣ' – ಗೀತೆಗಳ ಸ್ವಾರಸ್ಯವನ್ನು ವಿಶದಪಡಿಸಿ.

5. ಕೆ.ಎಸ್.ನರಸಿಂಹಸ್ವಾಮಿಯವರ 'ತೆರೆದ ಬಾಗಿಲು' ಕವನ ಸಂಕಲನದ ಯಾವುದಾದರೂ ಮೂರು ಕವನಗಳ ಆಶಯ ಮತ್ತು ವೈಶಿಷ್ಟ್ಯವನ್ನು ಕುರಿತು ಸಮಾಲೋಚಿಸಿ.

6. ಗೋಪಾಲಕೃಷ್ಣ ಅಡಿಗರ 'ಕಟ್ಟುವೆವು ನಾವು' ಕವನ ಸಂಕಲನದಲ್ಲಿನ 'ಮೋಹನ ಮುರಲಿ' 'ನಾವೆಲ್ಲರೂ ಒಂದೇ ಜಾತಿ' ಮತ್ತು 'ಸುಲುಗೆಯೆಂಬ ಯಾಗ ' – ಕವನಗಳ ಧೋರಣೆಗಳನ್ನು ವಿಶದಪಡಿಸಿ.

7. ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು' ಕವನ ಸಂಕಲನದಲ್ಲಿ ವ್ಯಕ್ತಗೊಂಡಿರುವ ದಲಿತ ಸಂವೇದನೆ ಮತ್ತು ಪ್ರತಿಭಟನೆಯನ್ನು ಕುರಿತು ಸೋದಾಹರಣವಾಗಿ ವಿವರಿಸಿ.

8. ವಿಜಯಾ ದಬ್ಬೆಯವರ 'ನೀರು ಲೋಹದ ಚಿಂತೆ' ಕವನ ಸಂಕಲನದಲ್ಲಿನ ಯಾವುದಾದರೂ ಮೂರು ಗೀತೆಗಳನ್ನು ವಸ್ತು, ಆಶಯದ ಹಿನ್ನೆಲೆಯಲ್ಲಿ ಚರ್ಚಿಸಿ.

9. ಕನ್ನಡದ ಸ್ತ್ರೀವಾದಿ ಸಾಹಿತ್ಯದ ಸ್ವರೂಪ ಮತ್ತು ಇತಿಹಾಸವನ್ನು ವಿಶದಪಡಿಸಿ.

10. ಅ) ಕೆಳಗಿನ ಪದ್ಯಗಳಲ್ಲಿ ಯಾವುದಾದರೂ **ಒಂದರ** ಭಾವ ಸ್ವಾರಸ್ಯವನ್ನು ನಿರೂಪಿಸಿ : **5**

1) ಆಕಾಶವೆ ನೀರಾಯ್ತೆನೆ
ಸುರಿಯುತ್ತಿದೆ ಭೋರ್ ಭೋರೆನೆ
ಮುಂಗಾರ್ ಮಳೆಧಾರೆ
ಲಯ ಭೀಷಣ ಮಳೆ ಭೈರವ
ಮೈದೋರಲು ಮರೆಯಾಗಿವೆ
ಭಯದಲಿ ಶಶಿತಾರೆ

2) ರಾಜ ಸುಂಗಾರವಾದ ರಾಣಿ ಸುಂಗಾರವಾದ್ಲು
ಕತ್ತೆಯ ಪೂಜೆಗೆ ಕುದಿರೇಯ | ಏರಿಕೊಂಡು
ಬಂದರು ಗೋರಿಯ ದೇವರಿಗೆ
ದಾರಿ ದೇವರ ಕಂಡು ಧನ್ಯರಾಗಲು ಅಂದು
ರಾಜರಾಣಿಯ ಜೊತೆ ಪರಿವಾರ | ಹರಿದಿತ್ತು
ಕೂಡಿತು ಪರುಸೆ ಕಡಲಾಗಿ

ಆ) ಯಾವುದಾದರೂ **ಎರಡರ** ಸಂದರ್ಭ ಸ್ವಾರಸ್ಯ ತಿಳಿಸಿ : **10**

1) ರವಿವದನವೆ ಶಿವಸದನವೊ ಬರಿಕಣ್ಣದು ಮಣ್ಣೊ
2) ಇಟ್ಟಾರು ಯಾರು ನಿಟ್ಟುಸಿರಿನ ಲೆಕ್ಕಾ
ಉಸುರಿನ ಲೆಕ್ಕಾ
3) ಎದೆಗು ಎದೆಗೂ ನಡುವಿದೆ ಹಿರಿಗಡಲು
4) ದಲಿತರು ಬಂದರು ದಾರಿ ಬಿಡಿ
ದಲಿತರ ಕೈಗೆ ರಾಜ್ಯ ಕೊಡಿ.

———————————

MK (P) 02

# ಪ್ರಥಮ ಎಂ. ಎ. ಪರೀಕ್ಷೆ, ಜೂನ್ 2009
## ಕನ್ನಡ ಹೊಸ ಪಠ್ಯಕ್ರಮ : ಸಿಮ್ ಸ್ಕೀಂ
## ಕೋರ್ಸ್– II : ಮಧ್ಯಕಾಲೀನ ಕನ್ನಡ ಸಾಹಿತ್ಯ

ಕಾಲ : 3 ಗಂಟೆ ಗರಿಷ್ಠಾಂಕ : 90

***ಸೂಚನೆಗಳು :*** *1) **ಹತ್ತನೆಯ** ಪ್ರಶ್ನೆಯನ್ನು ಬಿಡದೆ ಒಟ್ಟು **ಆರು** ಪ್ರಶ್ನೆಗಳಿಗೆ ಉತ್ತರಿಸಿ.*

*2) ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು.* **(15×6=90)**

1. ಮಧ್ಯಕಾಲೀನ ಕನ್ನಡ ಸಾಹಿತ್ಯದ ಪ್ರೇರಣೆಗಳನ್ನು ಕುರಿತು ಬರೆಯಿರಿ.

2. ಅಕ್ಕನ ವಚನಗಳಲ್ಲಿ ವ್ಯಕ್ತಗೊಂಡ ಶರಣಸತಿ – ಲಿಂಗಪತಿ ಭಾವವನ್ನು ನಿರೂಪಿಸಿ.

3. 'ನಂಬಿಯಣ್ಣನ ರಗಳೆ'ಯಲ್ಲಿ ವರ್ಣನೆಗೊಂಡ ನಂಬಿಯಣ್ಣನ ಶೃಂಗಾರಭಕ್ತಿಯನ್ನು ವರ್ಣಿಸಿರಿ.

4. ನಂಬಿಯಣ್ಣನ ರಗಳೆಯಲ್ಲಿನ ವೃದ್ಧಮಾಹೇಶ್ವರನ ಸನ್ನಿವೇಶದ ಸ್ವಾರಸ್ಯವನ್ನು ವಿಶದಪಡಿಸಿ.

5. 'ಸಿದ್ಧರಾಮಚಾರಿತ್ರ'ದಲ್ಲಿ ವರ್ಣಿತವಾದ ಪವಾಡಗಳ ಸಾಂಕೇತಿಕತೆಯನ್ನು ಕುರಿತು ಬರೆಯಿರಿ.

6. 'ಕರ್ಣಪರ್ವ'ದಲ್ಲಿ ಚಿತ್ರಣಗೊಂಡ ಕರ್ಣನ ಪಾತ್ರವನ್ನು ಕುರಿತು ವಿವೇಚಿಸಿ.

7. ಕನಕದಾಸರ ಕೀರ್ತನೆಗಳಲ್ಲಿ ವ್ಯಕ್ತಗೊಂಡ ಹರಿಭಕ್ತಿಯ ಸ್ವರೂಪವನ್ನು ನಿರೂಪಿಸಿ.

8. ಜೈಮಿನಿ ಭಾರತದಲ್ಲಿ ''ಚಂದ್ರಹಾಸನ ಕಥೆ' ಕರುಣರಸದ ಮಡುವಾಗಿದೆ'' ಈ ಹೇಳಿಕೆಯ ಔಚಿತ್ಯವನ್ನು ಪರಿಶೀಲಿಸಿರಿ.

9. ಭರತನ ಅಭಿಮಾನನಿರಸನದ ಪ್ರಸಂಗವನ್ನು ಪರಾಮರ್ಶಿಸಿ.

10. ಕೆಳಗಿನ ಪದ್ಯಗಳಲ್ಲಿ ಯಾವುದಾದರೂ **ಒಂದರ** ಭಾವ ಸ್ವಾರಸ್ಯವನ್ನು ವಿವರಿಸಿ. **5**

ಅ) ೧) ಪೂತುದೈವವೆ ಭೀಮಸೇನನ
ಘಾತಿಯಲಿ ಸೊಪ್ಪಾದೆನೈ ಸುಡ
ಲೇತಕೀಧನುವೇತಕೀ ದಿವ್ಯಾಸ್ತ್ರನಿಕರಗಳು
ಜಾತಿನಾನೆಂದೆನ್ನನಗ್ಗಿಸಿ
ಭೂತಳಾಧಿಪ ಸಾಕಿದನು ತಾ
ನೇತಱುಂದುಪಕಾರಿ ಎಂದುಸುಯ್ದು ಕಲಿಕರ್ಣ.

ಪು.ತಿ.ನೋ.

೨) ಹಲವೇನು ದೇಹ ಬೇರಾತ್ಮಬೇರೆಂದಾತ್ಮ

ಕಲೆಯ ಮುನ್ನೊಲ್ದು ಧ್ಯಾನಿಸಿದಾ ।

ಫಲದಿಂದ ದೊರೆಕೊಂಡುದಾ ರಾಯನಾರೂಪು

ಇಳೆಯೊಳೆಲ್ಲರಿಗೇಕೆ ಬಹುದಾ ॥

ಆ) ಕೆಳಗಿನವುಗಳಲ್ಲಿ ಯಾವುದಾದರೂ **ಎರಡರ** ಸಂದರ್ಭ ಸ್ವಾರಸ್ಯ ತಿಳಿಸಿ : **10**

೧) ಸಂತೆಯಲ್ಲೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯಾ

೨) ನೀನುದಯಿಸಿದುದೆ ಮಹಾಕ್ಷೇತ್ರವಾಯ್ತೆಂದ ಹದನನವಧರಿಸೆಂದರು

೩) ಮನದಲಿ ನೋವು ಮಿಗುವುದು, ಕೈಗಳೇಳವು ತುಡುಕುವಡೆ ಧನುವ

೪) ನಿಮ್ಮರಸನನು ಕರಸೆಲವೂ ಕಾದಿಸು ನಿನ್ನ ರಕ್ಷಿಸಲಿ

೫) ಹರಹರ ಕ್ಷೇಮವೇ ಈ ಶಾನಭಟ್ಟರೇ ।

**MK (P) 03**

**ಪ್ರಥಮ ಎಂ.ಎ. ಪರೀಕ್ಷೆ, ಜೂನ್ 2009**

**ಕನ್ನಡ**

**ಹೊಸ ಪಠ್ಯಕ್ರಮ : (ಸಿಮ್ ಸ್ಕೀಂ)**

**ಕೋರ್ಸ್ III : ಛಂದಸ್ಸು ಮತ್ತು ದ್ರಾವಿಡ ಭಾಷಾವಿಜ್ಞಾನ ಪರಿಚಯ**

ಕಾಲ : 3 ಗಂಟೆ ಗರಿಷ್ಠಾಂಕ : 90

**(15×6=90)**

***ಸೂಚನೆಗಳು :*** *1) **'ಅ'** ವಿಭಾಗದಿಂದ **ಐದನೆಯ** ಪ್ರಶ್ನೆಯನ್ನು ಬಿಡದೆ ಒಟ್ಟು **ಮೂರು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

*2) **'ಆ'** ವಿಭಾಗದಿಂದ **ಹತ್ತನೆಯ** ಪ್ರಶ್ನೆಯನ್ನು ಬಿಡದೆ ಒಟ್ಟು **ಮೂರು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

*3) **ಎಲ್ಲಾ** ಪ್ರಶ್ನೆಗಳಿಗೂ **ಸಮಾನ** ಅಂಕಗಳು.*

**'ಅ' ವಿಭಾಗ**

1. ಛಂದಸ್ಸು ಎಂದರೇನು ? ಕಾವ್ಯ ಸೌಂದರ್ಯ ವರ್ಧನೆಯಲ್ಲಿ ಅದು ವಹಿಸುವ ಪಾತ್ರವನ್ನು ಕುರಿತು ವಿವೇಚಿಸಿ.

2. ಕಂದದ ಉಗಮ ಲಕ್ಷಣ ಹಾಗೂ ಇತಿಹಾಸವನ್ನು ಸೋದಾಹರಣವಾಗಿ ನಿರೂಪಿಸಿ.

3. ನಾಗವರ್ಮ ಹೇಳಿರುವ ಕರ್ಣಾಟಕ ವಿಷಯ ಜಾತಿ ಛಂದಸ್ಸುಗಳು ಎಷ್ಟು? ಯಾವುವು ? ಅವುಗಳಲ್ಲಿ ಯಾವುದಾದರೂ ಎರಡರ ಲಕ್ಷಣಗಳನ್ನು ಸೋದಾಹರಣವಾಗಿ ವಿಶದಪಡಿಸಿ.

4. ಹೊಸಗನ್ನಡ ಛಂದಸ್ಸಿಗೆ ತೀ.ನಂ.ಶ್ರೀ ಅವರ ಕೊಡುಗೆಯೇನು ? ನಿರೂಪಿಸಿ.

5. ಅ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ :

೧) ಖ್ಯಾತ ಕರ್ಣಾಟಕಗಳು.

೨) ಮುಡಿ.

೩) ಮಂದಾನಿಲ ರಗಳೆ.

೪) ಗಣ ಪರಿವೃತ್ತಿ.

೫) ಅಂಶ ಷಟ್ಪದಿ.

ಆ) **ಒಂದು** ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡನೆ ಮಾಡಿ ಛಂದಸ್ಸಿನ ಲಕ್ಷಣವನ್ನು ತಿಳಿಸಿ.

೧) ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ

೨) ಕುಳಿರ್ವ ಪೂಗೊಳಂಗಳಲ್ಲಿ
ತಳಿವ ಕಾವಣಂಗಳಲ್ಲಿ

೩) ಸುನೀಲ ನಯನದಾಳದಲ್ಲಿ
ರಹಸ್ಯ ವಿಶ್ವಸ್ವಪ್ನದಲ್ಲಿ

## 'ಆ' ವಿಭಾಗ

6. ದ್ರಾವಿಡ ಭಾಷೆಯ ಪ್ರಮುಖ ಲಕ್ಷಣಗಳಾವುವು ? ವಿಚಾರ ಮಾಡಿ.

7. 'ಪ'ಕಾರ ಚರಿತ್ರೆಯ ವಿಶೇಷತೆಯನ್ನು ಕನ್ನಡಕ್ಕೆ ಸಂಬಂಧಿಸಿದಂತೆ ವಿವರಿಸಿ.

8. ದ್ರಾವಿಡ ಭಾಷೆಯಲ್ಲಿನ ಲಿಂಗ ವಿವಕ್ಷೆಯನ್ನು ಕುರಿತು ಚರ್ಚಿಸಿ.

9. **ಮೂರನ್ನು** ಕುರಿತು ಟಿಪ್ಪಣಿ ಬರೆಯಿರಿ :

   ೧) ದ್ರಾವಿಡ ಶಬ್ದದ ನಿಷ್ಪತ್ತಿ.

   ೨) ದ್ರಾವಿಡ ಭಾಷೆಗಳ ವರ್ಗೀಕರಣ.

   ೩) ಸರ್ವನಾಮಗಳು.

   ೪) ಪಂಚಮೀ ವಿಭಕ್ತಿ.

   ೫) ದ್ರಾವಿಡ ಭಾಷೆಗಳಲ್ಲಿ ವಚನ ವ್ಯವಸ್ಥೆ.

   ೬) ಸಂಖ್ಯಾ ವಾಚಕಗಳು.

10. ಯಾವುದಾದರೂ **ಐದು** ಪದಗಳಿಗೆ ಭಾಷಾ ವಿಜ್ಞಾನದ ದೃಷ್ಟಿಯಿಂದ ಟಿಪ್ಪಣಿ ಬರೆಯಿರಿ :

    ಕಬ್ಬಿಣ, ಕಲ್ಲಿದ್ದಲು, ಹಾಲುಕೀರು, ಅಮ್ಮ, ಇರುವೆ , ಹಿತ್ತಲು, ಕಾಲುವೆ, ಅರಸ, ಬೈರಾಗಿ, ವಾಲೆ.

———————

MK (P) 04

# ಪ್ರಥಮ ಎಂ.ಎ. ಪರೀಕ್ಷೆ, ಜೂನ್ 2009
## ಹೊಸ ಪಠ್ಯಕ್ರಮ : ಸಿಮ್ ಸ್ಕೀಂ
## ಕನ್ನಡ
## ಕೋರ್ಸ್ – IV : ಕನ್ನಡ ಸಾಹಿತ್ಯದ ಹಿನ್ನೆಲೆ : ಪ್ರೇರಣೆ ಮತ್ತು ಪ್ರಭಾವ

ಕಾಲ : 3 ಗಂಟೆ ಗರಿಷ್ಠಾಂಕ : 90

***ಸೂಚನೆ:*** *1) **ಹತ್ತನೆಯ** ಪ್ರಶ್ನೆಯನ್ನು ಬಿಡದೆ ಒಟ್ಟು **ಆರು** ಪ್ರಶ್ನೆಗಳಿಗೆ ಉತ್ತರಿಸಿ.*
*2) **ಎಲ್ಲಾ** ಪ್ರಶ್ನೆಗಳಿಗೂ **ಸಮಾನ** ಅಂಕಗಳು.* **(15×6=90)**

1. ಕನ್ನಡ ಸಾಹಿತ್ಯದ ಹಿನ್ನೆಲೆಯ ಅಧ್ಯಯನದ ಅಗತ್ಯ ಮತ್ತು ಪ್ರಯೋಜನಗಳನ್ನು ಕುರಿತಂತೆ ಪ್ರಬಂಧ ಬರೆಯಿರಿ.

2. ಪ್ರದೇಶವೊಂದರ ಭೌಗೋಳಿಕತೆ ಮತ್ತು ಸಂಸ್ಕೃತಿ ಅಲ್ಲಿಯ ಸಾಹಿತ್ಯದ ಮೇಲೆ ಬೀರುವ ಪ್ರಭಾವವನ್ನು ಕುರಿತು ವಿಶದಪಡಿಸಿ.

3. ಸಾಹಿತ್ಯದ ಮುನ್ನಡೆಯ ಮೇಲೆ ಧರ್ಮ ಒಂದು ಶಕ್ತ ಪ್ರೇರಣೆಯಾಗಿ ಹೇಗೆ ಪಾತ್ರ ವಹಿಸುತ್ತದೆ ? ಚರ್ಚಿಸಿ.

4. ಜೈನ ಧರ್ಮದ ಪ್ರಭಾವದ ಹಿನ್ನೆಲೆಯಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ ರೂಪುಗೊಂಡ ಬಗೆಯನ್ನು ವಿವರಿಸಿ.

5. ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಪ್ರಾಚೀನ ರಾಜವಂಶಗಳಿಂದ ಸಂದ ಕೊಡುಗೆಯ ಬಗ್ಗೆ ಪರಿಚಯ ಮಾಡಿಕೊಡಿ.

6. ''ಕನ್ನಡದ ಬೇರಿಗೆ ಸಂಸ್ಕೃತದ ನೀರು ಬಿದ್ದು ಒಂದು ವಿಶಿಷ್ಟವಾದ ಸಂಸ್ಕೃತಿಯ ಮರವು ಮೊಳೆತು ಬೆಳೆಯಿತು'' – ಚರ್ಚಿಸಿ.

7. ತಮಿಳು , ಮರಾಠಿ , ಮತ್ತು ಬಂಗಾಳಿ ಸಾಹಿತ್ಯಗಳ ಜೊತೆಯಲ್ಲಿ ಕನ್ನಡದ ನಂಟಿನ ಸ್ವರೂಪವನ್ನು ಕುರಿತು ಚರ್ಚಿಸಿ.

8. ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಪಾಶ್ಚಾತ್ಯ ಮನೋಧರ್ಮ ಹಾಗೂ ಇಂಗ್ಲೀಷ್ ಸಾಹಿತ್ಯ ವಹಿಸಿರುವ ಪಾತ್ರವನ್ನು ನಿರೂಪಿಸಿ.

9. ಭಾರತದ ಸ್ವಾತಂತ್ರ್ಯ ಸಂಗ್ರಾಮ ಹಾಗೂ ಆ ಕಾಲದ ರಾಷ್ಟ್ರೀಯ ಮನೋಭಾವನೆಗಳು ಕನ್ನಡ ಸಾಹಿತ್ಯದ ಮೇಲೆ ಬೀರಿದ ಪ್ರಭಾವವನ್ನು ಕುರಿತು ವಿಚಾರ ಮಾಡಿ.

10. **ಮೂರನ್ನು** ಕುರಿತು ಟಿಪ್ಪಣಿ ಬರೆಯಿರಿ :

    ೧. ಬ್ರಹ್ಮಶಿವ
    ೨. ರೆವರೆಂಡ್ ಎಫ್.ಕಿಟಲ್
    ೩. ಅ.ನ. ಕೃಷ್ಣರಾಯ
    ೪. ದಲಿತ ಬಂಡಾಯ ಸಾಹಿತ್ಯ
    ೫. 'ಇಂಗ್ಲೀಷ್ ಗೀತಗಳು '
    ೬. ಸ್ತ್ರೀವಾದಿ ಚಿಂತನೆ.

———————

MK (P) 05

# ಪ್ರಥಮ ಎಂ.ಎ. ಪರೀಕ್ಷೆ, ಜೂನ್ 2009
## ಹೊಸ ಪಠ್ಯಕ್ರಮ (ಸಿಮ್ ಸ್ಕೀಂ)
## ಕನ್ನಡ
## ಕೋರ್ಸ್ - V : ಜಾನಪದ ತತ್ತ್ವಗಳು ಮತ್ತು ಸಾಹಿತ್ಯ

ಸಮಯ : 3 ಗಂಟೆ　　　　ಗರಿಷ್ಠಾಂಕ : 90

*ಸೂಚನೆಗಳು :* *1) 'ಅ' ವಿಭಾಗದಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿ.*
*2) 'ಆ' ವಿಭಾಗದಲ್ಲಿ ಐದು ಪ್ರಶ್ನೆಗಳಿಗೆ ಉತ್ತರಿಸಿ.*
*3) ಹತ್ತನೆಯ ಪ್ರಶ್ನೆ ಕಡ್ಡಾಯವಾಗಿರುತ್ತದೆ.* **(15×6=90)**

**'ಅ' - ವಿಭಾಗ**

1. ಜನಪದ – ಜಾನಪದ ಎಂದರೇನು ? ಈ ಕುರಿತ ಚಿಂತನೆ 'ಜಾನಪದ ಸ್ವರೂಪ ' ಪಠ್ಯ ಕೃತಿಯಲ್ಲಿ ಹೇಗೆ ಮಂಡಿತವಾಗಿದೆ ವಿವೇಚಿಸಿ.

2. ಗಾದೆಗಳ ಸ್ವರೂಪ, ಲಕ್ಷಣ ಮತ್ತು ಕಾರ್ಯವನ್ನು ಕುರಿತು ಬರೆಯಿರಿ.

**'ಆ' ವಿಭಾಗ**

3. ಕನ್ನಡ ಜನಪದ ಕಥೆಯ ವಿವಿಧ ಬಗೆಯ ವರ್ಗೀಕರಣವನ್ನು ಪರಿಶೀಲಿಸಿ.

4. ತಾಯಿ ಮತ್ತು ತವರಿನ ಪ್ರೇಮ 'ಜನಪದ ಗೀತಾಂಜಲಿ' ಯಲ್ಲಿನ ತ್ರಿಪದಿಗಳಲ್ಲಿ ಹೇಗೆ ಮೂಡಿ ಬಂದಿದೆ ವಿವರಿಸಿ.

5. ಒಗಟುಗಳ ರಚನಾ ಸ್ವರೂಪ ಮತ್ತು ಕಾವ್ಯಗುಣಗಳನ್ನು 'ಸಾವಿರದ ಒಗಟುಗಳು ' ಸಂಕಲನದ ಉದಾಹರಣೆಗಳೊಡನೆ ವಿಶದಪಡಿಸಿ.

6. ಗಾದೆಗಳಲ್ಲಿ ವ್ಯಕ್ತವಾಗಿರುವ ಸಾಮಾಜಿಕ ಮೌಲ್ಯ ಕುರಿತ ವಿಚಾರಗಳನ್ನು ವಿವೇಚಿಸಿ.

7. ಬಾಳಣ್ಣ, ಪರಮ್ಮ, ಗಂಗಿ – ಇವುಗಳಲ್ಲಿ ಎರಡು ಪಾತ್ರಗಳನ್ನು ವಿಶ್ಲೇಷಿಸಿ.

8. ರಾಯಣ್ಣನ ಶೌರ್ಯ ಮತ್ತು ನಾಡ ಪ್ರೇಮ 'ಸಂಗೊಳ್ಳಿ ರಾಯಣ್ಣನ ದಂಗೆ' ಲಾವಣಿಯಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.

9. ಒಗಟುಗಳ 'ವಸ್ತು – ವೈವಿಧ್ಯ' ವನ್ನು ಸಾವಿರದ ಒಗಟುಗಳು ಕೃತಿಯ ಹಿನ್ನೆಲೆಯಲ್ಲಿ ಪರಿಚಯಿಸಿ.

10. **ಮೂರನ್ನು** ಕುರಿತು ಟಿಪ್ಪಣಿ ಬರೆಯಿರಿ :

೧) ರಮ್ಯ ಕಥೆಗಳು

೨) ಹಾ.ಮಾ. ನಾಯಕ

೩) ಜೆ.ಎಫ್. ಫ್ಲೀಟ್

೪) ನಡೀತ ಇದ್ರೆ ನೆಂಟು
ಬೆಳಗ್ತಾ ಇದ್ರೆ ಕಂಚು

೫) ಮೊಗ್ಗಾಗಿ ಅರಳುವುದು ಪುಷ್ಪ ತಾನಲ್ಲ
ಸೂರ್ಯ ಕಿರಣಕು ಅದು ಬಾಡುವುದಿಲ್ಲ

೬) ಬಂಜೆಯ ಬವಣೆ.

---

KN (P) 511

**ಪ್ರಥಮ ಎಂ. ಎ. ಪರೀಕ್ಷೆ, ಜೂನ್ 2009**
**(Non SIM)**
**ಕನ್ನಡ (ಹಳೆಯ ಪಠ್ಯಕ್ರಮ)**
**ಪತ್ರಿಕೆ – 1 : ಪ್ರಾಚೀನ ಕನ್ನಡ ಸಾಹಿತ್ಯ : ವಿಶೇಷ ಕವಿ ಅಥವಾ ಪ್ರಕಾರ : ಜನ್ನ**

ಕಾಲ : 3 ಗಂಟೆಗಳು ಗರಿಷ್ಠಾಂಕ : 100

***ಸೂಚನೆಗಳು :*** *1)* ***ಹತ್ತನೆಯ*** *ಪ್ರಶ್ನೆಯನ್ನು ಬಿಡದೆ ಒಟ್ಟು* ***ಐದು*** *ಪ್ರಶ್ನೆಗಳಿಗೆ ಉತ್ತರಿಸಿ.*
*2)* ***ಎಲ್ಲಾ*** *ಪ್ರಶ್ನೆಗಳಿಗೂ* ***ಸಮಾನ*** *ಅಂಕಗಳು.*

1. ಜನ್ನನ ಕಾಲ, ದೇಶ, ವ್ಯಕ್ತಿತ್ವವನ್ನು ವಿವಿಧ ಆಕರಗಳಿಂದ ಪರಿಶೀಲಿಸಿ ಬರೆಯಿರಿ.

2. ಜನ್ನನ ಕೃತಿಗಳಲ್ಲಿ ವ್ಯಕ್ತವಾಗಿರುವ ಜೈನಧರ್ಮದ ತತ್ತ್ವಗಳನ್ನು ವಿವರಿಸಿರಿ.

3. ''ಜನ್ನನ 'ಯಶೋಧರ ಚರಿತೆ' – ವಾದಿರಾಜನ ಕೃತಿಯ ಕುರುಡು ನಕಲಲ್ಲ, ಪಡಿಯಚ್ಚಲ್ಲ , ಉಜ್ವಲ ಪ್ರತಿರೂಪಣ''– ಎನ್ನುವ ಅಭಿಪ್ರಾಯವನ್ನು ಪರಿಶೀಲಿಸಿ.

4. 'ಯಶೋಧರ ಚರಿತೆ' ಯಲ್ಲಿ ಅಭಿವ್ಯಕ್ತಗೊಂಡಿರುವ ಅಮೃತಮತಿಯ ಮನೋಧರ್ಮವನ್ನು ವಿವರಿಸಿ.

5. 'ಯಶೋಧರ ಚರಿತೆ' ಯಲ್ಲಿ ಧರ್ಮ–ಕಾವ್ಯಧರ್ಮಗಳು ಸಮನ್ವಯ ಸಾಧಿಸಿರುವ ಬಗೆಯನ್ನು ವಿವರಿಸಿ.

6. 'ಅನಂತನಾಥಪುರಾಣ' ದ ಚಂಡಶಾಸನ ಪ್ರಕರಣ ಕಾವ್ಯದ ಒಂದು ರಸಸ್ಥಾನ – ವಿವೇಚಿಸಿ.

7. ಅಮೃತಮತಿ– ಅಷ್ಟಾವಂಕರ ಪ್ರಣಯ ಪ್ರಸಂಗವೂ, ಚಂಡಶಾಸನ–ಸುನಂದೆಯರ ಪ್ರಣಯ ಪ್ರಸಂಗವೂ ಪರಸ್ಪರ ಪೂರಕವಾಗಿದ್ದಂತೆ ಕಾಣುತ್ತದೆ'– ಈ ಅಭಿಪ್ರಾಯವನ್ನು ಒಪ್ಪುತ್ತೀರಾ ? ವಿವೇಚಿಸಿ.

8. 'ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ ಕೊಂದು ಕೂಗದೆ ನರರಂ' ಎನ್ನುವ ಜನ್ನನ ಮಾತನ್ನು 'ಯಶೋಧರ ಚರಿತೆ' ಯ ಹಿನ್ನಲೆಯಲ್ಲಿ ವಿಮರ್ಶಿಸಿ.

9. ಜನ್ನನ ಅಭಿವ್ಯಕ್ತಿ ವಿಧಾನದಲ್ಲಿ ವ್ಯಕ್ತವಾಗಿರುವ ದೇಸಿಯ ಸೊಬಗನ್ನು ವಿವರಿಸಿ.

**P.T.O.**

10. ಅ) ಕೆಳಗಿನ ಪದ್ಯಗಳಲ್ಲಿ **ಒಂದರ** ಭಾವ ಮತ್ತು ಸ್ವಾರಸ್ಯವನ್ನು ವಿವರಿಸಿ.

೧) ಸಿಸಿರಮನೆ ಪಿಡಿದು ಪರಕೆಗೆ
ವಸಂತನಲರ್ವೊೞವ ಮಾವಿನಡಿಮಂಚಿಕೆಯೊಳ್
ಕುಸುರಿದ ಱದಡಗಿನಂತೆವೊ
ಲೆಸೆದುವು ತದ್ವನದೊಳುದಿರ್ದ ಮುತ್ತದ ಮುಗುಳ್ಗಳ್

೨) ಆಗಳ್ ಬಾಳ್‌ನಿಮಿರ್ದುದು ತೋಳ್
ತೂಗಿದುದು ಮನಂ ಕನಲ್ದುದಿರ್ವರು ಮನೆರ
ಟ್ಬಾಗಂ ಮಾಡಲ್ ಧೃತಿ ಬಂ
ದಾಗಳ್ ಮಾಣೆಂಬ ತೆಱದೆ ಪೇಸಿದನರಸಂ

ಆ) ಕೆಳಗಿನವುಗಳಲ್ಲಿ **ನಾಲ್ಕರ** ಸಂದರ್ಭ ಸೂಚಿಸಿ ಟಿಪ್ಪಣಿ ಬರೆಯಿರಿ :

೧) ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ

೨) ಪೊಲ್ಲಮೆಯ ಲೇಸು ನಲ್ಲರ ಮೆಯ್ಯೊಳ್

೩) ತುಪ್ಪೇಱದ ದರ್ಪಣದೊಳ್ ಪಜ್ಜಳಿಸಲಾರ್ಪುದೇ ಪ್ರತಿಬಿಂಬಂ

೪) ಪೆತ್ತ ಪರೀಷಹ ಜಯಮೆ ತಪಂ ತಪಕೆ
ಬೇಱೆ ಕೋಡೆರಡೊಳವೇ ?

೫) ಬೇವಂ ಮೆಚ್ಚಿದ ಕಾಗೆಗೆ ಮಾವಿಳಿದಪ್ಪಂತೆ
ಪತಿಯೊಳಿಳಿದಾಯ್ತು ಮನಂ

೬) ಕಡು ನಂಟನ ಸತಿಯ ರೂಪು ಸೋಲಿಸಿತೆನ್ನಂ.

KN (P) 512

# ಪ್ರಥಮ ಎಂ. ಎ. ಪರೀಕ್ಷೆ, ಜೂನ್ 2009
## (ಹಳೆಯ ಪಠ್ಯಕ್ರಮ : Non SIM)
## ಕನ್ನಡ
## ಪತ್ರಿಕೆ – 2 : ಮಧ್ಯಕಾಲೀನ ಕನ್ನಡ ಸಾಹಿತ್ಯ : ವಿಶೇಷ ಕವಿ ಅಥವಾ ಪ್ರಕಾರ : ಕುಮಾರವ್ಯಾಸ

ಕಾಲ : 3 ಗಂಟೆಗಳು ಗರಿಷ್ಠಾಂಕ : 100

***ಸೂಚನೆ :*** *1) **ಹತ್ತನೆಯ** ಪ್ರಶ್ನೆಯನ್ನು ಬಿಡದೆ ಒಟ್ಟು **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

*2) ಎಲ್ಲಾ ಪ್ರಶ್ನೆಗಳಿಗೂ **ಸಮಾನ** ಅಂಕಗಳು.*

1. ಗದುಗಿನ ನಾರಣಪ್ಪನ ಕಾಲ, ದೇಶ ಮತ್ತು ಅವನ ವೈಯಕ್ತಿಕ ಚರಿತ್ರೆಯನ್ನು ಸಂಗ್ರಹವಾಗಿ ವಿವರಿಸಿ.

2. ''ಕುಮಾರವ್ಯಾಸ ವಿಶಿಷ್ಟ ಶಕ್ತಿಯ ಸ್ವತಂತ್ರ ಕವಿ''– ವಿಚಾರ ಮಾಡಿ.

3. ಕಿರಾತಾರ್ಜುನೀಯ ಪ್ರಸಂಗ ಅಥವಾ ಅರ್ಜುನೋರ್ವಶೀಯ ಪ್ರಸಂಗವನ್ನು ಕುಮಾರವ್ಯಾಸ ಹೇಗೆ ಚಿತ್ರಿಸಿದ್ದಾನೆ ? ವಿವರಿಸಿ.

4. ''ಮಹಾಭಾರತದಲ್ಲೆಲ್ಲಾ ಅತಿಯಾಗಿ ನೊಂದವಳೆಂದರೆ ದ್ರೌಪದಿ ಎಂದೇ ಹೇಳಬೇಕು''. ಈ ಹೇಳಿಕೆಯನ್ನು ಕುರಿತು ಚರ್ಚಿಸಿ.

5. ಕುಮಾರವ್ಯಾಸನ ಮೂಸೆಯಲ್ಲಿ ಮೂಡಿಬಂದಿರುವ ಕರ್ಣನ ಪಾತ್ರ ವೈಶಿಷ್ಟ್ಯವನ್ನು ವಿಶದಪಡಿಸಿ.

6. ''ಶ್ರೀಕೃಷ್ಣನ ಪಾತ್ರ ಕುಮಾರವ್ಯಾಸನ ಭಾರತದಲ್ಲಿ ಅತ್ಯಂತ ಪ್ರಧಾನವೂ ವಿಶಿಷ್ಟವೂ ಸರ್ವಪ್ರೇರಕವೂ ಚೋದಕವೂ ಆದುದು''. ಈ ಹೇಳಿಕೆಗೆ ಪ್ರತಿಕ್ರಿಯಿಸಿ.

7. ಉತ್ತರಕುಮಾರನ ಪಾತ್ರ ಕುಮಾರವ್ಯಾಸನಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ.

8. ''ಸುಪ್ರತೀಕ ಗಜ''ದ ಪ್ರಸಂಗ ಕುಮಾರವ್ಯಾಸ ಭಾರತದ ಅತ್ಯುತ್ತಮ ಪ್ರಸಂಗಗಳಲ್ಲಿ ಒಂದು''– ಹೇಗೆ ? ವಿಚಾರ ಮಾಡಿ.

9. ಈ ಕೆಳಗಿನವುಗಳಲ್ಲಿ **ಎರಡರ** ಪಾತ್ರ ಚಿತ್ರಣ ಮಾಡಿ.

   (೧) ದುರ್ಯೋಧನ (೨) ಕೀಚಕ (೩) ಭೀಷ್ಮ (೪) ವಿದುರ

10. ಅ) ಕೆಳಗಿನ ಪದ್ಯಗಳಲ್ಲಿ **ಒಂದರ** ಭಾವ ಮತ್ತು ಸ್ವಾರಸ್ಯವನ್ನು ವಿವರಿಸಿ.

೧) ಏನು ಸಿದ್ಧಿಯುಪಾಧ್ಯರೆದ್ದಿ ರಿ
ದೇನು ಧನುವಿಂಗಲ್ಲಲೇ ತಾ
ನೇನು ಮನದಂಘವಣೆ ಬಯಸಿದಿರೇನಿತಂ ಬಿನಿಯ
ವೈನತೇಯನ ವಿಗಡಿಸಿದ ವಿಷ
ವೇನು ಸದರವೊ ಹಾವಡಿಗರಿಗಿ
ದೇನು ನಿಮ್ಮುತ್ಸಾಹವೆಂದುದು ಧೂರ್ತ ವಟು ನಿಕರ

**ಅಥವಾ**

೨) ಬಿಡು ಮರೀಚಿಯ ತೊರೆಗೆ ಹರುಗೋ
ಲಿಡುವರುಂಟೇ ಲೆಪ್ಪದುರಗನ
ಹಿಡಿವಡೇತಕೆ ಗರುಡಮಂತ್ರವು ಚಪಲನೆನ್ನದಿರು
ಕೊಡನ ಮಗನ ಕುಮಂತ್ರದೊಡ್ಡಿನ
ಕಡಿತಕಾನಂಜುವೆನೆ ವೆಗ್ಗಳ
ನುಡಿಯಲಮ್ಮೆನು ತನ್ನನೀಗಳೆ ಬಿಟ್ಟುನೋಡೆಂದ

ಆ) **ನಾಲ್ಕನ್ನು** ಕುರಿತು ಸಂದರ್ಭ ಸೂಚಿಸಿ ಟಿಪ್ಪಣಿ ಬರೆಯಿರಿ :

೧) ತರಣಿ ತೆಗೆದನು ತಾವರೆಯ ಬಾಗಿಲಿನ ಬೀಯಗವ

೨) ಎನ್ನ ಹೃದಯದೊಳಿರ್ದು ಮುರಿವನು ಗನ್ನದಲಿ ಸಂಧಿಯನು

೩) ಪಡುವಣ ಶೈಲ ವಿಪುಲಸ್ತಂಭ ದೀಪಿಕೆಯಂತೆ ರವಿ ಮೆರದ

೪) ಸಿಡಿಲ ಪೊಟ್ಟಣಗಟ್ಟಿ ಸೇಕವ ಕೊಡುವರೇ

೫) ಅಪಕೀರ್ತಿಯ ನಾರಿಯ ಸೆರಗ ಹಿಡಿದರು

೬) ನಾಲುವರ ನಡುವಣ ಹಾವು ಸಾಯದು

KN (P) 513

# ಪ್ರಥಮ ಎಂ. ಎ. ಪರೀಕ್ಷೆ, ಜೂನ್ 2009
## (ಹಳೆಯ ಪಠ್ಯಕ್ರಮ : Non SIM)
## ಕನ್ನಡ
## ಪತ್ರಿಕೆ – 3 : ಛಂದಸ್ಸು ಮತ್ತು ದ್ರಾವಿಡ ಭಾಷಾ ವಿಜ್ಞಾನ ಪರಿಚಯ

ಕಾಲ : 3 ಗಂಟೆಗಳು ಗರಿಷ್ಠಾಂಕ : 100

*ಸೂಚನೆ : 1) 'ಅ' ವಿಭಾಗದಿಂದ **ಐದನೆಯ** ಪ್ರಶ್ನೆಯನ್ನು ಬಿಡದೆ **ಮೂರು** ಪ್ರಶ್ನೆಗಳಿಗೂ*

*2) 'ಆ' ವಿಭಾಗದಿಂದ **ಹತ್ತನೆಯ** ಪ್ರಶ್ನೆಯನ್ನು ಬಿಡದೆ **ಮೂರು** ಪ್ರಶ್ನೆಗಳಿಗೂ ಉತ್ತರ ಬರೆಯಿರಿ.*

### 'ಅ' ವಿಭಾಗ

೧. ಛಂದಸ್ಸಿನ ಸ್ವರೂಪ–ಲಕ್ಷಣ–ಪ್ರಯೋಜನಗಳನ್ನು ವಿವರಿಸಿರಿ. **10**

೨. ಷಟ್ಪದಿಯ ಸ್ವರೂಪ –ಪ್ರಕಾರ –ಪರಂಪರೆಯನ್ನು ಕುರಿತು ಬರೆಯಿರಿ. **10**

೩. ವೃತ್ತ ಎಂದರೇನು ? ಅಕ್ಷರವೃತ್ತ, ಮಾತ್ರಾವೃತ್ತ, ಅಂಶವೃತ್ತಗಳ ಪರಿಚಯವನ್ನು ಸ್ಥೂಲವಾಗಿ ಮಾಡಿಕೊಡಿರಿ. **10**

೪. ಹೊಸಗನ್ನಡ ಛಂದಸ್ಸಿನ ವಿವಿಧ ಲಯಗಳನ್ನು ಉದಾಹರಣೆಗಳೊಂದಿಗೆ ತಿಳಿಯಪಡಿಸಿರಿ. **10**

೫. ಅ) **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ : **20**

೧) ತ್ರಿಪದಿ

೨) ಕಂದ

೩) ಸಾಂಗತ್ಯ

೪) ಲಲಿತರಗಳೆಯ ಲಕ್ಷಣ

೫) ಮುಡಿ–ಪದ್ಮಗಣ

೬) ಖ್ಯಾತ ಕರ್ನಾಟಕಗಳು

೭) ಛಂದೋಂಬುಧಿ

೮) ಗೀತಿಕೆ.

ಆ) **ಎರಡು** ಪದ್ಯಭಾಗಗಳಿಗೆ ಪ್ರಸ್ತಾರ ಹಾಕಿ, ಗಣ ವಿಂಗಡನೆ ಮಾಡಿ ಛಂದಸ್ಸಿನ ಲಕ್ಷಣ ಹಾಗೂ ವಿಶೇಷಾಂಶಗಳನ್ನು ತಿಳಿಸಿ.

೧) ಕುಲಮನೆ ಮುನ್ನ ಮುಗ್ಗಡಿಪಿರೇಂ ಗಳ ನಿಮ್ಮ ಕುಲಂಗಳಾಂತು ಮಾ

೨) ಶರರೂಪದೊಳಿರೆ ನಿನ್ನಂ
ಶರಮೆಂದಾಂ ತೊಟ್ಟೆನಱಿದು ತುಡುವೆನೆ ನಿನ್ನಂ

೩) ನಿನ್ನ ಹರಣ
ನನಗೆ ಶರಣ
ಸಕಲ ಕಾರ್ಯ ಕಾರಣೌ।

೪) ಪರಮ ಪರಂಜ್ಯೋತಿ ಕೋಟಿಚಂದ್ರಾದಿತ್ಯ
ಕಿರಣ ಸುಜ್ಞಾನ ಪ್ರಕಾಶ।

## 'ಬ' ವಿಭಾಗ

೬. ದ್ರಾವಿಡ ಭಾಷೆಗಳ ಸ್ವರೂಪ – ಲಕ್ಷಣಗಳನ್ನು ಕುರಿತು ಬರೆಯಿರಿ. **10**

೭. ದ್ರಾವಿಡ ಭಾಷೆಗಳನ್ನು ಕುರಿತು ನಡೆದ ಅಧ್ಯಯನದ ಸ್ವರೂಪವನ್ನು ನಿರೂಪಿಸಿ. **10**

೮. ದ್ರಾವಿಡ ಭಾಷೆಗಳಲ್ಲಿ ತೋರುವ ಲಿಂಗವ್ಯವಸ್ಥೆಯನ್ನು ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸಿ. **10**

೯. ದ್ರಾವಿಡ ಭಾಷೆಗಳಲ್ಲಿ ಕಂಡು ಬರುವ ಕ > ಚ ತಾಲವ್ಯೀಕರಣದ ವಿಧಾನವನ್ನು ಸೋದಾಹರಣ ಗುರುತಿಸಿ. **10**

೧೦. ಅ) **ನಾಲ್ಕಕ್ಕೆ** ಕುರಿತು ಟಿಪ್ಪಣಿ ಬರೆಯಿರಿ : **20**

೧) ಮೂಲ ದ್ರಾವಿಡ

೨) ದ್ರಾವಿಡ ಭಾಷೆಗಳ ವರ್ಗೀಕರಣ ವಿಧಾನ

೩) ದ್ರಾವಿಡ ಭಾಷೆಗಳಲ್ಲಿ ಘೋಷ ವರ್ಣಗಳು

೪) ಬ್ರಾಹು ಈ ಭಾಷೆ

೫) ದ್ರಾವಿಡ ಸಂಖ್ಯಾವಾಚಿಗಳು

೬) ಕಾಲ್ಡ್‌ವೆಲ್

೭) ದ್ರಾವಿಡ ವಿಭಕ್ತಿ ವ್ಯವಸ್ಥೆ

೮) ಎಂ. ಬಿ. ಎಮಿನೊ

ಆ) **ಐದು** ಶಬ್ದಗಳಿಗೆ ಭಾಷಾಶಾಸ್ತ್ರದ ದೃಷ್ಟಿಯಿಂದ ಟಿಪ್ಪಣಿ ಬರೆಯಿರಿ :

ಗುಂಡುಸೂಜಿ, ಆಕಳು, ಸೊಸೆ, ಕಲ್ಲೆಣ್ಣೆ , ಹಾಜರಿ, ತೋಂಟ, ಹಣ್ಣುಹಂಪಲು, ಬೆಂಗಳೂರು, ಕುಪ್ಪಸ, ಜಂಟಿಕಾರ್ಯದರ್ಶಿ.

**KN (P) 515 (A)**

**ಪ್ರಥಮ ಎಂ.ಎ. ಪರೀಕ್ಷೆ, ಜೂನ್ 2009**
**(ಹಳೆಯ ಪಠ್ಯಕ್ರಮ : Non-SIM)**
**ಕನ್ನಡ**
**ಪತ್ರಿಕೆ – 5 A : ಜಾನಪದ ಅಧ್ಯಯನ: ಸಂಸ್ಕೃತಿ ಅಧ್ಯಯನ**

ಗರಿಷ್ಠಾಂಕ : 100

ಕಾಲ : 3 ಗಂಟೆಗಳು

***ಸೂಚನೆಗಳು :*** *1)* ***ಹತ್ತನೆಯ*** *ಪ್ರಶ್ನೆಯನ್ನು* ***ಬಿಡದೆ*** *ಒಟ್ಟು* ***ಐದು*** *ಪ್ರಶ್ನೆಗಳಿಗೆ ಉತ್ತರಿಸಿರಿ.*
*2)* ***ಎಲ್ಲಾ*** *ಪ್ರಶ್ನೆಗಳಿಗೂ* ***ಸಮಾನ*** *ಅಂಕಗಳು.*

1. ''ಮಾನವ ನಿರ್ಮಿತ ಪರಿಸರದ ಭಾಗವೇ ಸಂಸ್ಕೃತಿ'' – ಚರ್ಚಿಸಿ.

2. 'ಸಂಸ್ಕೃತೀಕರಣ' ಎಂದರೇನು ? ಸೂಕ್ತ ಉದಾಹರಣೆಗಳೊಂದಿಗೆ ಉತ್ತರಿಸಿ.

3. ಸಂಸ್ಕೃತಿಯೊಂದಿಗೆ ಜನಾಂಗ (Race) ಹೊಂದಿರುವ ಸಂಬಂಧವನ್ನು ಕುರಿತು ವಿಮರ್ಶಾತ್ಮಕವಾಗಿ ಬರೆಯಿರಿ.

4. ಸಂಸ್ಕೃತಿಯನ್ನು ಅರ್ಥೈಸುವಲ್ಲಿ ಕ್ರಿಯಾತ್ಮಕ ಸಿದ್ಧಾಂತದ (Functional theory) ಪಾತ್ರವೇನು ? ವಿವೇಚಿಸಿ.

5. ಬಂಧುತ್ವ ಎಂದರೇನು ? ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ವಿಶ್ಲೇಷಿಸಿ.

6. ಕುಟುಂಬ ಎಂದರೇನು ? ಅದರ ಸ್ವರೂಪ ಮತ್ತು ಬೆಳವಣಿಗೆ ಕುರಿತು ವಿಚಾರ ಮಾಡಿರಿ.

7. ಕುಲದೇವತಾರಾಧನೆ (Totemism) ಎಂದರೇನು ? ಅದರ ಗುಣ ಹಾಗೂ ಪರಿಮಿತಿಗಳನ್ನು ಪರಿಶೀಲಿಸಿ.

8. ಬೇಟೆ ಸಂಸ್ಕೃತಿಯ ವಿಶೇಷವೇನು ? ನಾಗರೀಕತೆಯ ವಿಕಾಸದಲ್ಲಿ ಅದರ ಸ್ಥಾನಮಾನಗಳು ಹೇಗೆ ಬದಲಾದವು ? ವಿವೇಚಿಸಿ.

9. ಮಾನವನ ಬದುಕಿನ ವಿಕಾಸದಲ್ಲಿ ಕೃಷಿಯ ಶೋಧ ಹೇಗೆ ಆಯಿತು ? ಅವನು ಸಾಕು ಪ್ರಾಣಿಗಳನ್ನು ಕಂಡುಕೊಂಡ ಬಗೆ ಏನು ? ವಿವರಿಸಿ.

10. ಯಾವುದಾದರೂ **ನಾಲ್ಕನ್ನು** ಕುರಿತು ಟಿಪ್ಪಣಿ ಬರೆಯಿರಿ :

೧) ವಿವಾಹದ ಬಗೆಗಳು.

೨) ವಸತಿ ನೆಲೆಗಳು.

೩) ದೂರವಿಡುವಿಕೆ.

೪) ಡಿ.ವಿ.ಜಿ.

೫) ಸಂಸ್ಕೃತಿಯ ಕಾರ್ಯಗಳು.

೬) ಮೀನುಗಾರಿಕೆ.

______________

KN (P) 514 (B)

**ಪ್ರಥಮ ಎಂ.ಎ. ಪರೀಕ್ಷೆ, ಜೂನ್ 2009**

**ಕನ್ನಡ**

**ಹಳೆಯ ಪಠ್ಯಕ್ರಮ**

**(Non-SIM)**

**ಪತ್ರಿಕೆ – 4B : ಹಳಗನ್ನಡ ವ್ಯಾಕರಣ (ಶಬ್ದಮಣಿ ದರ್ಪಣಂ) ಮತ್ತು ಕನ್ನಡ ಭಾಷೆಯ ಚರಿತ್ರೆ**

**(ನಿಯಮಾವಳಿ 01ರ ವಿದ್ಯಾರ್ಥಿಗಳಿಗೆ ಮಾತ್ರ)**

ಕಾಲ : 3 ಗಂಟೆ — ಗರಿಷ್ಠಾಂಕ : 100

***ಸೂಚನೆ :*** *1) ಯಾವುದಾದರೂ* ***ಒಂದು*** *ವಿಭಾಗದಿಂದ* ***ಮೂರು*** *ಪ್ರಶ್ನೆಗಳಿಗೂ ಮತ್ತೊಂದು ವಿಭಾಗದಿಂದ* ***ಎರಡು*** *ಪ್ರಶ್ನೆಗಳಿಗೂ ಉತ್ತರಿಸಿ.*

*2) ಎಲ್ಲಾ ಪ್ರಶ್ನೆಗಳಿಗೂ* ***ಸಮಾನ*** *ಅಂಕಗಳು.*

**ಅ ವಿಭಾಗ**

**ಹಳಗನ್ನಡ ವ್ಯಾಕರಣ**

1. 'ನಾಲ್ವತ್ತೇೞಾಯ್ತಳೆ ಶುದ್ಧಗೆಯಚ್ಚಗನ್ನಡಕ್ಕೀ ಕ್ರಮದಿಂ' – ಕೇಶಿರಾಜನ ಈ ಹೇಳಿಕೆಯನ್ನು ವಿವರಿಸಿ.

2. ಲಿಂಗ ವಿಭಜನೆಯನ್ನು ಕುರಿತ ಕೇಶಿರಾಜನ ನಿರೂಪಣೆಯನ್ನು ಸಮೀಕ್ಷಿಸಿ.

3. ಸಂಧಿದೋಷ ಎಂದರೇನು ? ಸಂಧಿದೋಷಗಳನ್ನು ಉದಾಹರಣೆಗಳೊಡನೆ ವಿವರಿಸಿ.

4. ಸಮಾಸಗಳಲ್ಲಿ ಯಾವುದಾದರೂ ನಾಲ್ಕನ್ನು ಸೋದಾಹರಣವಾಗಿ ವಿವರಿಸಿ.

5. ಕೆಳಗಿನ ಸೂತ್ರಕ್ಕೆ ವ್ಯಾಖ್ಯಾನವನ್ನು ಬರೆದು ಉದಾಹರಣೆಗಳನ್ನು ಕೊಡಿ.

   ಯರಲಣನಳಱೞಟ ವರ್ಣೋ
   ತ್ಕರಮೆ ವಲಂ ಪದದ ಕಡೆಯೊಳಸ್ವರ ವಿಧಿಯಿಂ
   ಪಿರಿದುಂ ತಾಳ್ದುಗು ಮಿವನಱೆ
   ವರೆ ಕನ್ನಡಗಬ್ಬದೊಳ್ ತೊಡಂಕದೆ ಸಲ್ವರ್

6. **ನಾಲ್ಕನ್ನು** ಕುರಿತು ಟಿಪ್ಪಣಿ ಬರೆಯಿರಿ :

   ೧) ದ್ವಿವಚನ
   ೨) ವಿಭಕ್ತಿ ಪಲ್ಲಟ
   ೩) ಪ್ಲುತ
   ೪) ವಮ ಹಪ ಭೇದ
   ೫) ಕಾಲಸೂಚಕ ಪ್ರತ್ಯಯಗಳು
   ೬) ತದ್ಧಿತ ಪ್ರತ್ಯಯ

P.T.O.

## ಆ ವಿಭಾಗ
## ಕನ್ನಡ ಭಾಷೆಯ ಚರಿತ್ರೆ

7. ಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತು ಬರೆಯಿರಿ.

8. ಕನ್ನಡ ಭಾಷೆಯ ಅವಸ್ಥಾಭೇಧಗಳನ್ನು ಕುರಿತ ವಿದ್ವಾಂಸರ ಅಭಿಪ್ರಾಯಗಳನ್ನು ಸಮೀಕ್ಷಿಸಿ.

9. ಕರ್ನಾಟಕ–ಕನ್ನಡ ಶಬ್ದಗಳ ನಿಷ್ಪತ್ತಿಯನ್ನು ಕುರಿತು ಬರೆಯಿರಿ.

10. ಕನ್ನಡ ಸರ್ವನಾಮಗಳ ಚರಿತ್ರೆಯನ್ನು ವಿವರಿಸಿ.

11. ಕನ್ನಡ ಗುಣವಾಚಕ ಮತ್ತು ಸಂಖ್ಯಾವಾಚಕಗಳನ್ನು ಕುರಿತು ಬರೆಯಿರಿ.

12. **ನಾಲ್ಕನ್ನು** ಕುರಿತು ಟಿಪ್ಪಣಿ ಬರೆಯಿರಿ :

೧) ಮೂಲ ದ್ರಾವಿಡ ಭಾಷೆ

೨) ಪೂರ್ವದ ಹಳಗನ್ನಡ

೩) ಕನ್ನಡ ಸಂಸ್ಕೃತ ಸಂಬಂಧ

೪) ಕನ್ನಡದಲ್ಲಿ ಪಂಚಮೀ ವಿಭಕ್ತಿ ಪ್ರತ್ಯಯ

೫) ಧಾರವಾಡ ಕನ್ನಡ

೬) ಕನ್ನಡದಲ್ಲಿ ಅನ್ಯದೇಶ್ಯ ಪದಗಳು.

---

**KN (P) 514 A**

**ಪ್ರಥಮ ಎಂ.ಎ. ಪರೀಕ್ಷೆ, ಜೂನ್ 2009**

**ಹಳೆಯ ಪಠ್ಯಕ್ರಮ (Non-SIM)**

**ಕನ್ನಡ**

**ಪತ್ರಿಕೆ - 4 A: ಕನ್ನಡ ಸಾಹಿತ್ಯದ ಹಿನ್ನೆಲೆ : ಪ್ರೇರಣೆ ಮತ್ತು ಪ್ರಭಾವ**

**(ನಿಯಮಾವಳಿ 2ರ ನಿಯತ ವಿದ್ಯಾರ್ಥಿಗಳಿಗೆ ಮಾತ್ರ)**

ಕಾಲ : 3 ಗಂಟೆ                                                                                    ಗರಿಷ್ಠಾಂಕ : 100

***ಸೂಚನೆಗಳು :*** *1) **ಹತ್ತನೆಯ** ಪ್ರಶ್ನೆಯನ್ನು ಬಿಡದೆ ಒಟ್ಟು **ಐದು** ಪ್ರಶ್ನೆಗಳಿಗೆ ಉತ್ತರಿಸಿ.*
*2) **ಎಲ್ಲಾ** ಪ್ರಶ್ನೆಗಳಿಗೂ **ಸಮಾನ** ಅಂಕಗಳು.*

1. ''ಪ್ರಾಚೀನ ಕನ್ನಡ ಸಾಹಿತ್ಯದ ಸ್ವರೂಪವನ್ನು ಬಹುತೇಕ ಧರ್ಮ ನಿಯಂತ್ರಿಸಿದೆ'' – ಈ ಹೇಳಿಕೆಯನ್ನು ಪರಿಶೀಲಿಸಿ.

2. ಪಂಪ, ನಾಗಚಂದ್ರ, ರತ್ನಾಕರವರ್ಣಿ–ಈ ಮೂವರು ಕವಿಗಳಿಗೆ ಜೈನ ಧರ್ಮವು ನೀಡಿದ ಪ್ರೇರಣೆಯ ಸ್ವರೂಪವನ್ನು ವಿವರಿಸಿ.

3. ಹನ್ನೆರಡನೆಯ ಶತಮಾನದ ವಚನ ಚಳವಳಿಯ ಸಾಮಾಜಿಕ ಮತ್ತು ಸಾಹಿತ್ಯಕ ಮಹತ್ವವನ್ನು ವಿವರಿಸಿ.

4. ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯದಿಂದ ದೊರೆತ ಪ್ರೇರಣೆಗಳಾವುವು ? ವಿಶದಪಡಿಸಿ..

5. ನವೋದಯ ಕಾವ್ಯದ ಮುಖ್ಯ ಪ್ರೇರಣೆಗಳಾವುವು ? ಸ್ಪಷ್ಟಪಡಿಸಿ.

6. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ ಚಳವಳಿಯ ಮಹತ್ವವೇನು ? ಚರ್ಚಿಸಿ.

7. ಕನ್ನಡ ಸಾಹಿತ್ಯಕ್ಕೆ ಚಾಲುಕ್ಯ ಮತ್ತು ಹೊಯ್ಸಳರು ನೀಡಿದ ಕೊಡುಗೆಗಳಾವುವು ? ವಿವೇಚಿಸಿ.

8. ಕನ್ನಡ ಸಾಹಿತ್ಯದ ಮೇಲೆ ಭಾರತದ ಸ್ವಾತಂತ್ರ್ಯ ಚಳವಳಿಯು ಬೀರಿದ ಪ್ರಭಾವವೇನು ? ನಿರೂಪಿಸಿ.

9. ''ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ''–ಈ ಹೇಳಿಕೆಯನ್ನು ದಲಿತ–ಬಂಡಾಯ ಸಾಹಿತ್ಯದ ಹಿನ್ನೆಲೆಯಲ್ಲಿ ವಿಚಾರಮಾಡಿ.

10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    1) ಮರಾಠಿ–ಕನ್ನಡ ಸಂಬಂಧ

    2) ವಡ್ಡಾರಾಧನೆ

    3) ಕಿಟೆಲ್

    4) ಅಸ್ತಿತ್ವವಾದ

    5) ರಾಷ್ಟ್ರೀಯವಾದ

    6) ಅಶ್ವತ್ಥಾಮನ್.

---

KN (P) 515 B

ಪ್ರಥಮ ಎಂ.ಎ. ಪರೀಕ್ಷೆ, ಜೂನ್ 2009

ಕನ್ನಡ

(ಹಳೆಯ ಪಠ್ಯಕ್ರಮ : Non-SIM)

ಪತ್ರಿಕೆ – 5 B : ಚಾರಿತ್ರಿಕ ಅಧ್ಯಯನ : ಕರ್ನಾಟಕ ಸಾಂಸ್ಕೃತಿಕ ಚರಿತ್ರೆ

ಕಾಲ : 3 ಗಂಟೆಗಳು ಗರಿಷ್ಠಾಂಕ : 100

***ಸೂಚನೆಗಳು :*** *1) **ಹತ್ತನೆಯ** ಪ್ರಶ್ನೆಯನ್ನು ಬಿಡದೆ ಒಟ್ಟು **ಐದು** ಪ್ರಶ್ನೆಗಳಿಗೆ ಉತ್ತರಿಸಿ.*
*2) ಎಲ್ಲಾ ಪ್ರಶ್ನೆಗಳಿಗೂ **ಸಮಾನ** ಅಂಕಗಳು.*

1. ಸಂಸ್ಕೃತಿ ಎಂದರೇನು ? ಭಾರತೀಯ ಸಂಸ್ಕೃತಿಯ ಸಾಮಾನ್ಯ ಸ್ವರೂಪವನ್ನು ಸಮೀಕ್ಷಿಸಿ.

2. ಕರ್ನಾಟಕ-ಕನ್ನಡ ಶಬ್ದಗಳ ಪ್ರಾಚೀನತೆ , ಅರ್ಥವ್ಯಾಪ್ತಿ ಮತ್ತು ನಿಷ್ಪತ್ತಿಗಳನ್ನು ವಿದ್ವಾಂಸರ ಅಭಿಪ್ರಾಯಗಳೊಂದಿಗೆ ವಿಶದಪಡಿಸಿ.

3. ಕರ್ನಾಟಕದ ಚರಿತ್ರೆಯಲ್ಲಿ ದುರ್ವಿನೀತ, ಇಮ್ಮಡಿ ಪುಲಿಕೇಶಿ, ವಿಷ್ಣುವರ್ಧನ, ಶ್ರೀ ಕೃಷ್ಣದೇವರಾಯ - ಇವರಲ್ಲಿ ಇಬ್ಬರ ವ್ಯಕ್ತಿತ್ವ-ಸಾಧನೆಗಳನ್ನು ನಿರೂಪಿಸಿ.

4. ಕರ್ನಾಟಕದ ಸಂಸ್ಕೃತಿಗೆ ಬಾದಾಮಿಯ ಚಾಲುಕ್ಯರ ಕೊಡುಗೆ ಏನು ? ವಿವರಿಸಿ.

5. ವಚನ ಚಳುವಳಿಯ ಸಾಮಾಜಿಕ , ಧಾರ್ಮಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ವಿವರಿಸಿ.

6. ಪ್ರಾಚೀನ ಕರ್ನಾಟಕದ ಶಿಕ್ಷಣ ಪದ್ಧತಿಯನ್ನು ನಿದರ್ಶನಪೂರ್ವಕವಾಗಿ ವಿವರಿಸಿ.

7. ರಾಷ್ಟ್ರಕೂಟರ ಕಾಲದ ಜನಜೀವನ, ಆಡಳಿತಪದ್ಧತಿ, ಕಲೆ, ಸಾಹಿತ್ಯಗಳನ್ನು ಕುರಿತು ವಿವರಿಸಿ.

8. ಹೊಯ್ಸಳರು ಕಲೆ ಮತ್ತು ಸಾಹಿತ್ಯಕ್ಕೆ ನೀಡಿದ ಪ್ರೇರಣೆ -ಪ್ರೋತ್ಸಾಹಗಳೇನು ? ವಿವೇಚಿಸಿ.

9. ಮೈಸೂರು ಒಡೆಯರ ಕಾಲದ ಆಡಳಿತ ಪದ್ಧತಿಯ ವೈಶಿಷ್ಟ್ಯಗಳನ್ನು ವಿವರಿಸಿ.

10. ಯಾವುದಾದರೂ **ನಾಲ್ಕನ್ನು** ಕುರಿತು ಟಿಪ್ಪಣಿ ಬರೆಯಿರಿ : **(5×4=20)**

1) ವೀರಗಲ್ಲು–ಮಾಸ್ತಿಗಲ್ಲುಗಳು

2) ಸಂಸ್ಕೃತಿ -ನಾಗರೀಕತೆ

3) ಗೌತಮೀಪುತ್ರ ಶಾತಕರ್ಣಿ

4) ಬಾದಾಮಿ ಗುಹೆಗಳು

5) ಬಸವಣ್ಣ

6) ಯಾತ್ರಿಕರು ಕಂಡ ವಿಜಯನಗರದ ಜೌನ್ನತ್ಯ.

---